# ದಯಾಮರಣವೂ ಶೇಷಾದ್ರಿಯೂ..

ಪಿ. ಶೇಷಾದ್ರಿ 'ವಿದಾಯ' ಎನ್ನುವ ಮತ್ತೊಂದು ಸಿನಿಮಾ ನಿರ್ದೇಶಿಸಿದ್ದಾರೆ. ಅದನ್ನು ಪತ್ರಕರ್ತ ಮಿತ್ರರಿಗೆಂದೇ ಮೊದಲು ತೋರಿಸಿದ್ದಾರೆ. ದೇಶಾದ್ಯಂತ ಚರ್ಚೆಯಾಗುತ್ತಿರುವ ದಯಾಮರಣ ಈ ಸಿನಿಮಾದ ಮುಖ್ಯ ವಸ್ತು. ದಯಾಮರಣ ಬೇಕೆ, ಬೇಡವೆ ಎನ್ನುವ ಚರ್ಚೆಯನ್ನು ತಮ್ಮದೇ ಆದ ವಿಧಾನದಲ್ಲಿ ನಿರೂಪಿಸುವ ಶೇಷಾದ್ರಿ, ಈ ಪ್ರಶ್ನೆಗೆ ತಮ್ಮ ಸಿನಿಮಾದ ಮೂಲಕ ಸ್ಪಷ್ಟ ಉತ್ತರವನ್ನಂತೂ ಕೊಡುವುದಿಲ್ಲ. ಆದರೆ ಹಾಸಿಗೆ ಹಿಡಿದು ಬದುಕಲಾಗದೆ ನರಳುತ್ತಿರುವ ಜೀವಗಳ ನೋವಿಗೆ ಮಿಡಿವ ಧ್ವನಿಯಂತೂ ಆಗಿದ್ದಾರೆ. ಸಮಕಾಲೀನ ವಿಷಯಗಳ ಬಗ್ಗೆ ತಕ್ಷಣ ಸ್ಪಂದಿಸಿ ಅದರ ಮೇಲೊಂದು ಸಿನಿಮಾ ಮಾಡುವುದು ಶೇಷಾದ್ರಿಯವರಿಗೆ ಪ್ರಿಯವಾದ ಕೆಲಸವಾದಂತಿದೆ. ಮುಖ್ಯಮಂತ್ರಿಯೊಬ್ಬರು ಎಚ್‌ಐವಿ ಪೀಡಿತ ವ್ಯಕ್ತಿಯ ಮನೆಯಲ್ಲಿ ವಾಸ್ತವ್ಯ ಹೂಡುವುದರ ಸುತ್ತ ಹೆಣೆದ 'ಡಿಸೆಂಬರ್ ಒಂದು', ಜಾಗತೀಕರಣದ ಪರಿಣಾಮವಾಗಿ ಮಾಲ್‌ಗಳ ಸಂಖ್ಯೆ ಹೆಚ್ಚುತ್ತಿದ್ದು ಕಿರಾಣಿ ಅಂಗಡಿಗಳು ಬಾಗಿಲು ಮುಚ್ಚುತ್ತಿರುವುದರ ಬಗ್ಗೆ 'ಭಾರತ್ ಸ್ಟೋರ್ಸ್'– ಹೀಗೆ ಈ ಹಿಂದಿನ ಚಿತ್ರಗಳಲ್ಲೂ ಶೇಷಾದ್ರಿ ಸಮಕಾಲೀನ ವಿಷಯಗಳ ಬಗ್ಗೆ ಗಮನ ಸೆಳೆದಿದ್ದರು. ಇದೀಗ ದಯಾಮರಣದ ಸರದಿ.

ಅಪಘಾತಕ್ಕೆ ಒಳಗಾಗಿ ಮಾತು, ಕೈಕಾಲು ಸ್ವಾಧೀನ ಕಳೆದುಕೊಂಡು ಎಂಟು ವರ್ಷಗಳಿಂದ ಮನೆಯಲ್ಲೇ ಹಾಸಿಗೆ ಹಿಡಿದ ಗಂಡನ ಸೇವೆಯಲ್ಲಿ ಹೈರಾಣಾಗುವ, ಆದರೆ ಆತನ ಸಾವನ್ನು ಒಪ್ಪದ ಪತ್ನಿಯ ಕಥೆಯಿದು. ಗಂಡ ಹಠ ಹಿಡಿದು ಕೊನೆಗೂ ದಯಾಮರಣಕ್ಕೆ ಅರ್ಜಿ ಸಲ್ಲಿಸುತ್ತಾನೆ. ಅಲ್ಲಿಂದ ಶುರುವಾಗುತ್ತದೆ ತಲ್ಲಣ. ಮಲಗಿದ್ದಲ್ಲೇ ರೋಗಿ ಆಚೀಚೆ ಮನೆಗಳ ಮಹಡಿಗಳ ಮೇಲೆ ನಡೆಯುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಇರುತ್ತಾನೆ. ಇತ್ತ ಪತ್ನಿ ಹೊರಜಗತ್ತಿನ ಎಲ್ಲ ಒತ್ತಡಗಳನ್ನೂ ಎದುರಿಸುತ್ತಾ ತನ್ನ ಒಳತೋಟಿಗಳನ್ನು ಒಬ್ಬಂಟಿಯಾಗಿ ಅನುಭವಿಸುತ್ತಾಳೆ. ದಯಾಮರಣಕ್ಕೆ ಅರ್ಜಿ ಸಲ್ಲಿಸಿದ ಬಳಿಕ ಆಕೆ ತನ್ನ ಕಚೇರಿಯಲ್ಲಿ ಮಾತ್ರವಲ್ಲ, ಮನೆಯಲ್ಲಿ ಮಗನಿಂದಲೂ ಹಲವು ಪ್ರಶ್ನೆಗಳನ್ನು ಎದುರಿಸುತ್ತಾಳೆ. ಶೇಷಾದ್ರಿ ನಿರೂಪಣೆಯಲ್ಲಿ ಈ ಕ್ರೌರ್ಯ ತಣ್ಣಗೆ ಹರಿಯುತ್ತದೆ. ಪತ್ನಿ ಮಧ್ಯರಾತ್ರಿ ಗಂಡನ ಕೋಣೆಗೆ ಬಂದು ಗುಲಾಬಿ ನೀಡಿ ಹ್ಯಾಪಿ ಬರ್ತ್‌ಡೇ ಹೇಳುವುದು, ಮೌನವಾಗಿ ಟಿವಿಯುವ ಮಗನ ಜತೆಗೆ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುವುದು ಮುಂತಾದ ಕೆಲವು ದೃಶ್ಯಗಳಂತೂ ಪ್ರೇಕ್ಷಕರನ್ನು ಇನ್ನಿಲ್ಲದಂತೆ ಕಾಡುತ್ತದೆ.



ಇಷ್ಟಾಗಿಯೂ 'ವಿದಾಯ' ಒಟ್ಟು ಬಂಧದಲ್ಲಿ ಪ್ರೇಕ್ಷಕನನ್ನು ಗಾಢವಾಗಿ ತಟ್ಟುವ ಚಿತ್ರವಾಗಿಲ್ಲ. ಈ ಹಿಂದಿನ 'ಭಾರತ್ ಸ್ಟೋರ್' ಸಿನಿಮಾದಂತೆ ಮೇಲ್ಪದರದ ಸಂವೇದನೆಯಾಗಿಬಿಡುತ್ತದೆ. ಇಲ್ಲಿ ಅತ್ಯುತ್ತಮವೆನ್ನಿಸುವ ದೃಶ್ಯಗಳೂ ಬಿಡಿ ಬಿಡಿಯಾಗಿ ಅನುಭವ ವೇದ್ಯವಾಗುತ್ತದೆಯೇ ಹೊರತು, ಒಂದೇ ನೂಲಿನ ಹೊಲಿಗೆಯಾಗುವುದಿಲ್ಲ. ಮಲ್ಪೆಗೆ 'ಪ್ರವಾಸ' ಹೋದ ದತ್ತಣ್ಣನ ಪಾತ್ರವಂತೂ ಹೊರಗೇ ಉಳಿದುಬಿಡುತ್ತದೆ. ಕೊನೆಯಲ್ಲಿ ಜಾನಪದ ನೃತ್ಯವೊಂದನ್ನು ಎಳೆದು ತುರುಕಿರುವ ಶೇಷಾದ್ರಿ ಆ ಮೂಲಕ ಏನನ್ನು ಹೇಳುತ್ತಿದ್ದಾರೆ ಎನ್ನುವುದೂ ಗೊತ್ತಾಗುವುದಿಲ್ಲ. ರೋಗಿಯ ಪಾತ್ರದಲ್ಲಿ ಸುಚೇಂದ್ರ ಪ್ರಸಾದ್ ಮತ್ತು ಮಗನ ಪಾತ್ರದಲ್ಲಿ ಪ್ರಥಮ (ಈತ ಶೇಷಾದ್ರಿಯವರ ಮಗ!) ಅವರ ನಟನೆ ಪಕ್ಕಾ ನೆನಪಿನಲ್ಲಿ




ಉಳಿಯುತ್ತದೆ. ಪತ್ನಿಯಾಗಿ ಲಕ್ಷ್ಮೀ ಗೋಪಾಲಸ್ವಾಮಿ ತುಂಬ ಶ್ರಮ ವಹಿಸಿದ್ದಾರೆ. ಸಭಾಕುಮಾರ್ ಕ್ಯಾಮೆರಾ ಕೆಲಸಕ್ಕೆ ಪೂರ್ತಿ ಅಂಕಗಳು ಸಲ್ಲುತ್ತವೆ.

ದಯಾಮರಣಕ್ಕೆ ಸಂಬಂಧಿಸಿ ಇತ್ತೀಚಿನ (2010) ಸಿನಿಮಾಗಳ ನೆನಪಾಗುವುದೆಂದರೆ ಹಿಂದಿಯ 'ಗುಜಾರಿಶ್' ಮತ್ತು ಮರಾಠಿಯ 'ಸುಖಾಂತ್'. ಸಂಜಯ ಲೀಲಾ ಬನ್ಸಾಲಿಯ 'ಗುಜಾರಿಶ್'ನಲ್ಲಿ ಅಪಘಾತದಲ್ಲಿ ಸ್ವಾಧೀನ ಕಳೆದುಕೊಂಡು 8 ವರ್ಷ ಹಾಸಿಗೆಯಲ್ಲೇ ಕಳೆಯುವ ಹೀರೋ ಮತ್ತು ಆತನ ಸೇವೆ ಮಾಡುವ ನರ್ಸ್ ಸುತ್ತ ಕಥೆಯಿದೆ. 'ಸುಖಾಂತ್'ನಲ್ಲಿ ನಿರ್ದೇಶಕ ಸಂಜಯ್ ಸುರ್ಕರ್, (ಇವರು ಮೂರು ವರ್ಷಗಳ ಹಿಂದೆ ಇನ್ನೊಂದು ಸಿನಿಮಾದ ಸೆಟ್‌ನಲ್ಲೇ ಹೃದಯಾಘಾತಕ್ಕೆ ಒಳಗಾಗಿ ಸಾವನ್ನಪ್ಪಿದರು) ಅಪಘಾತಕ್ಕೆ ಒಳಗಾಗಿ ಮಲಗಿದಲ್ಲೇ ಆದ ಗಂಡನಿಂದ ಬೇರಾದ ಮಹಿಳೆಯ ಸುತ್ತ ಕಥೆ ಹೆಣೆದಿದ್ದಾರೆ. ಬನ್ಸಾಲಿಯ ಸಿನಿಮಾದಲ್ಲಿ ಹೃತಿಕ್ ರೋಶನ್, ಐಶ್ವರ್ಯ ರೈ ಇದ್ದರೂ ಎಲ್ಲೂ ಮನಸ್ಸಿಗೆ ತಟ್ಟಲಿಲ್ಲ. ಆದರೆ 'ಸುಖಾಂತ್' ನಟಿ ಜ್ಯೋತಿ ಬಾಂದೇಕರ್ ಮತ್ತು ವಕೀಲನ ಪಾತ್ರದ ಅತುಲ್ ಕುಲಕರ್ಣಿಯ ಅತ್ಯುತ್ತಮ ನಟನೆಯಿಂದಾಗಿ ಇವತ್ತಿಗೂ ಕಾಡುವ ಸಿನಿಮಾ.

ಸಿನಿಮಾ ತೋರಿಸುವುದಕ್ಕೂ ಮುನ್ನ ಕನ್ನಡದಲ್ಲಿ ಇತ್ತೀಚೆಗೆ ರಾಷ್ಟ್ರ ಮತ್ತು ರಾಜ್ಯಪ್ರಶಸ್ತಿ ಗಳಿಸಿದ ಎಲ್ಲ ಕಲಾವಿದ– ತಂತ್ರಜ್ಞರನ್ನೂ ವೇದಿಕೆಗೆ ಕರೆಸಿ ಗೌರವಿಸುವ ಮೂಲಕ ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್ ಮತ್ತು ಶೇಷಾದ್ರಿ ಅಲ್ಲಿದ್ದ ಎಲ್ಲರ ಮನಸ್ಸನ್ನೂ ಗೆದ್ದರು. ಸರ್ಕಾರ ಮತ್ತು ಫಿಲಂ ಚೇಂಬರ್ ಮಾಡಲಾಗದ ಕೆಲಸವನ್ನು ಇವರಿಬ್ಬರೂ ಸೇರಿ ಮಾಡಿದ್ದು ನಿಜಕ್ಕೂ ನೆನಪಿಡುವಂತಹ ಘಟನೆ.

■ ಹನಿ